ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ103/3915/2019-20** **ದಿನಾಂಕ:** 18 JUN 2020

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ),
ಕಂಪನಿ ಕಾರ್ಯಾಲಯ,
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ,
ಮಂಗಳೂರು.

ಮಾನ್ಯರೆ,

**ವಿಷಯ:** ಅನುಕಂಪದ ಆಧಾರದ ಮೇರೆಗೆ ನೇಮಕಾತಿ ಮಾಡಲು ನೇರ ನೇಮಕಾತಿ ಕೋಟಾದಡಿಯಲ್ಲಿ ಹುದ್ದೆಗಳು ಖಾಲಿ ಇಲ್ಲದಿರುವ ಬಗ್ಗೆ.

**ಉಲ್ಲೇಖ:** 1. ತಮ್ಮ ಪತ್ರ ಸಂಖ್ಯೆ: 13187-195, ದಿನಾಂಕ: 18.02.2020.
2. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂ.ಸಂ.659), ಬೆಂಗಳೂರು ಇವರ ಪತ್ರ ಸಂಖ್ಯೆ: ಕವಿಪ್ರನಿನೌಸಂ/800/19-20, ದಿನಾಂಕ: 09.03.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರಗಳ ಕಡೆ ತಮ್ಮ ಗಮನವನ್ನು ಕೋರಿದೆ. ನೌಕರನು ಮರಣ ಹೊಂದಿದಾಗ ಅವರ ಕುಟುಂಬವು ತಕ್ಷಣದ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು ಅನುಕೂಲಕವಾಗಲು, ನೌಕರನ ಕುಟುಂಬದ ಅರ್ಹ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡಲಾಗುತ್ತದೆ. ಅರ್ಹ ಅವಲಂಬಿತರು ಹೊಂದಿರುವ ವಿದ್ಯಾರ್ಹತೆಯ ಆಧಾರದ ಮೇರೆಗೆ ಹುದ್ದೆಯನ್ನು ನೀಡಲು ನೇರ ನೇಮಕಾತಿ ಕೋಟಾದಡಿಯಲ್ಲಿ ಹುದ್ದೆಗಳು ಖಾಲಿ ಇರುವುದಿಲ್ಲವೆಂದು, ವಿಳಂಬ ಧೋರಣೆ ಅನುಸರಿಸುವುದು ಸೂಕ್ತವಾಗಿರುವುದಿಲ್ಲ.

ಮುಂದುವರೆದು, ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಯ ಅಧ್ಯಾಯ-1 ರ ನಿಬಂಧನೆ-18 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ:

*"ಈ ನಿಯಮಗಳು ಯಾವುದನ್ನೇ ಒಳಗೊಂಡಿದ್ದರೂ ಅಥವಾ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ರಚಿಸಲಾದ ನೌಕರಿ ಭರ್ತಿ ನಿಯಮಗಳಲ್ಲಿ ಏನೇ ಇದ್ದರೂ, ನೇಮಕಾತಿ ಪ್ರಾಧಿಕಾರವು,*

*ಎ. ಬಡತಿಯಿಂದ ತುಂಬಲು ಮೀಸಲಾದ ಹುದ್ದೆಗೆ ನೇರ ನೌಕರಿ ಭರ್ತಿಯಿಂದ, ಅಥವಾ*
*ಬಿ. ಯಾವುದೇ ಖಾಲಿ ಹುದ್ದೆಗೆ ಸಂಬಂಧಿಸಿದಂತೆ, ಅದನ್ನು ನೇರ ನೌಕರಿ ಭರ್ತಿಯಿಂದ ತುಂಬಬೇಕಾಗಿದ್ದರೂ ಮಂಡಳಿ ಸೇವೆಯ ಜರೂರು ಅವಶ್ಯಕತೆಯ ಸಂದರ್ಭದಲ್ಲಿ ಬಡತಿಯಿಂದ ತುಂಬಬಹುದಾಗಿರುತ್ತದೆ."*

ಆದ್ದರಿಂದ ನಿಗಮದ ದಿವಂಗತ ನೌಕರರ ಕುಟುಂಬದ ಹಿತದೃಷ್ಟಿಯಿಂದ, ಪದೋನ್ನತಿ ಪಾಲಿಗೆ ಮೀಸಲಿಟ್ಟಿರುವ ಸಹಾಯಕ ಪದವೃಂದದಲ್ಲಿ ಹುದ್ದೆಗಳು ಖಾಲಿ ಇದ್ದಲ್ಲಿ ಸದರಿ ಹುದ್ದೆಗಳನ್ನು ಮೇಲೆ ತಿಳಿಸಿದ ನಿಯಮದ ಅಡಿಯಲ್ಲಿ ಭರ್ತಿ ಮಾಡಲು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ತಿಳಿಸಲಾಗಿದೆ.

**"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿರುತ್ತದೆ"**

**ತಮ್ಮ ವಿಶ್ವಾಸಿ,**

18/6/2020

**ಉಪ ಪ್ರಧಾನ ವ್ಯವಸ್ಥಾಪಕರು**
**(ಸಿಬ್ಬಂದಿ)**

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಪ್ರಧಾನ ವ್ಯವಸ್ಥಾಪಕರು(ಆ. ಮತ್ತು ಮಾಸಂ), ಬೆಸ್ಕಾಂ/ಸೆಸ್ಕ್/ಹೆಸ್ಕಾಂ/ಜೆಸ್ಕಾಂ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂ.ಸಂ.659), 'ಎ' ಸ್ಟೇಷನ್ ಆವರಣ, ಸುಬೇದಾರ್ ಛತ್ರಂ ರಸ್ತೆ, ಆನಂದ್ ರಾವ್ ವೃತ್ತ, ಬೆಂಗಳೂರು–560 009.